ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 392/2019

ಪಿ ಡಬ್ಲ್ಯೂ: 4
ಸಿ ಡಬ್ಲ್ಯೂ: 1

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕಟೇಶ್ |
| ತಂದೆಯ ಹೆಸರು | : | ರಾಮಪ್ಪ ರಿಂದೇರ |
| ವಯಸ್ಸು | : | 35 |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ: 06-06-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಮೃತ ಗುರುನಾಥ ಚಿದಾನಂದ ಐರಣಿ ಇವರು ನನ್ನ ಅಣ್ಣ. ಚಾ ಸಾ 4 ಮತ್ತು ಗಾಯಾಳು ಖುಷಿ ನನ್ನ ಅತ್ತಿಗೆ ಮತ್ತು ಅವರ ಮಗಳು. ಡಿಸೆಂಬರ್ 2018 ರಂದು ನನ್ನ ಅಣ್ಣ, ಅತ್ತಿಗೆ ಹಾಗೂ ಅವರ ಮಗಳು ದ್ವಿಚಕ್ರ ವಾಹನದಲ್ಲಿ ಸಾಯಿಬಾಬಾ ದೇವಸ್ಥಾನಕ್ಕೆ ಹೋಗುವಾಗ, ಸದರಿ ದೇವಸ್ಥಾನದ ತಿರುವಿನಲ್ಲಿ ಅಪಘಾತವಾಗಿದ್ದು ಈ ಬಗ್ಗೆ ನನಗೆ ಚಾ ಸಾ 5 ರವರು ಫೋನ್ ಮಾಡಿ ತಿಳಿಸಿದ್ದು ಕೂಡಲೇ ನಾನು ಸಾಯಿ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಅಣ್ಣನ ತಲೆಯ ಹಿಂಭಾಗಕ್ಕೆ ಹಾಗೂ ಕೈ ಕಾಲುಗಳಿಗೆ ತೀವ್ರ ಗಾಯಗಳಾಗಿದ್ದು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಚಾ ಸಾ 4 ಮತ್ತು ಅವರ ಮಗಳು ಖುಷಿ ರವರಿಗೂ ಸಹ ರಕ್ತಗಾಯಗಳಾಗಿದ್ದು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿಂದ ನನ್ನ ಅಣ್ಣ ಗುರುನಾಥ ಹಾಗೂ ಚಾ ಸಾ 4 ರವರನ್ನು ಮಂಗಳೂರಿನ ಮಣಿಪಾಲ ಆಸ್ಪತ್ರೆಗೆ, ಅಲ್ಲಿಂದ ಹುಬ್ಬಳ್ಳಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ನನ್ನ ಅಣ್ಣ ಗುರುನಾಥ ರವರು ಚಿಕಿತ್ಸೆಗೆ ಸ್ಪಂದಿಸದೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.

2. ಈ ಸಂಬಂಧ ನಾನು ಎರಡು ದಿನಗಳ ನಂತರ ದೂರು ನೀಡಿರುತ್ತೇನೆ. ಸಾಕ್ಷಿದಾರರಿಗೆ ದಿನಾಂಕ 09-12-2018 ರ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು **ನಿಪಿ 18** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 18 ಎ** ಎಂದು ಗುರುತಿಸಲಾಯಿತು.

3. ನಿಪಿ 18 ರ ದೂರಿನ ಮೇರೆಗೆ ಅದೇ ದಿನ ಪೊಲೀಸರು ಮಧ್ಯಾಹ್ನ ಘಟನಾ ಸ್ಥಳಕ್ಕೆ ಬೇಟಿ ನೀಡಿ, ನಾನು ಸ್ಥಳ ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ, ಪೋಟೋ ತೆಗೆಸಿರುತ್ತಾರೆ. ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿರುವ ಮಹಜರು ಹಾಗೂ ನಿಪಿ 2 ರಿಂದ 5 ರ ಪೋಟೋಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ನಿಪಿ 1 ರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಬಿ** ಎಂದು ಗುರುತಿಸಲಾಯಿತು. ಆ ನಂತರ ಠಾಣೆಗೆ ಹೋಗಿ ಅಪಘಾತಪಡಿಸಿದ ಹಾಗೂ ಅಪಘಾತಕ್ಕೊಳಪಟ್ಟ ವಾಹನಗಳನ್ನು ನಾನು ಗುರುತಿಸಿದ ಮೇರೆಗೆ ಜಪ್ತು ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿರುತ್ತಾರೆ. ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿರುವ ಮಹಜರು ಹಾಗೂ ನಿಪಿ 7 ರಿಂದ 10 ರ ಪೋಟೋಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ನಿಪಿ 6 ರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 6 ಬಿ** ಎಂದು ಗುರುತಿಸಲಾಯಿತು. ತೀವ್ರ ಗಾಯಗೊಂಡಿದ್ದ ನನ್ನ ಅಣ್ಣ ಮೃತಪಟ್ಟ ನಂತರ ಠಾಣೆಗೆ ಮಾಹಿತಿ ನೀಡಿರುತ್ತೇನೆ. ಸಾಕ್ಷಿದಾರರು ದಿನಾಂಕ 19-12-2018 ರ ಮರುಹೇಳಿಕೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ 19** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 19 ಎ** ಎಂದುಗುರುತಿಸಲಾಯಿತು.

4. ಈ ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ತಿಳಿದಿಲ್ಲ. ನಾನು ಈ ವಿಷಯವನ್ನು ಯಾರಿಂದಲೂ ಕೇಳಿ ತಿಳಿದುಕೊಂಡಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ</u>**

ಚಾ ಸಾ 5 ರವರು ಅಪಘಾತದ ಮಾಹಿತಿ ತಿಳಿಸಿದ ಕೂಡಲೇ ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನವನ್ನು ನೋಡಲಾಗಿ ಅದು ಬಜಾಜ್ ಮೋಟಾರ್ ಸೈಕಲ್ ನಂ.ಕೆಎ-27/ಜೆ-2701 ಆಗಿತ್ತು ಎಂದರೆ ನನಗೆ ತಿಳಿದಿಲ್ಲ. ಅಪಘಾತಕ್ಕೊಳಪಟ್ಟ ನನ್ನ ಅಣ್ಣನ ದ್ವಿಚಕ್ರ ವಾಹನ ಸಂಖ್ಯೆ ಕೆಎ-27/ಇಎಲ್-1347 ಎಂದರೆ ನನಗೆ ನೆನಪಿಲ್ಲ. ಅಪಘಾತಪಡಿಸಿದ ದ್ವಿಚಕ್ರ ವಾಹನ ಚಾಲಕನ ಹೆಸರು ಗಣೇಶ್ ನಿಂಗಪ್ಪ ಅಗಡಿ

ಎಂದು ತಿಳಿದು ಬಂದಿತು ಎಂದರೆ ಸರಿಯಲ್ಲ. ಅವರಿಗೂ ಸಹ ಅಪಘಾತದಲ್ಲಿ ತರಚಿದ



ಗಾಯಗಳು ಆಗಿತ್ತು ಎಂದರೆ ನನಗೆ ತಿಳಿದಿಲ್ಲ. ಈ ಅಪಘಾತ ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.